**MS – 039**

## 2ನೇ ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ಮೇ/ಜೂನ್ 2014
## (ಫ್ರೆಶರ್ಸ್ + ರಿಪೀಟರ್ಸ್ ಸ್ಕೀಂ) (2011-12 & Onwards)
## ಕನ್ನಡ ಭಾಷಾ ಪತ್ರಿಕೆ – II
## ಸಾಹಿತ್ಯ ಸಲ್ಲಾಪ – I

Time : 3 Hours　　　　Max. Marks : 100

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ. **(1×6=6)**

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ
　　　　ಸುಳಿವ ತಂಗಾಳಿಯಿಂ
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ
　　　　ಎಂದರು.

ST. CLARET COLLEGE
LIBRARY

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×3=6)**

ದೇವನೂರು ಮಹಾದೇವ
ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು.
ಚಿತ್ರಮಾಲೆ.

II. ಅ) ಐದು ಪದಗಳಿಗೆ ಮೂಲರೂಪ ಬರೆಯಿರಿ. **(5×1=5)**

ಮಿಗ, ಕಿರಿಸ್ತಾನ, ಮೇಷ್ಟ್ರು, ಯತ್ತಾಗ, ಟುವಾಲು, ಬಾಸೆ, ಜೈಲು.

ಆ) ಐದು ಪದಗಳಿಗೆ ಅರ್ಥ ಬರೆಯಿರಿ. **(5×1=5)**

ಮತಿ, ಆಜ್ಯ, ಉದಕ, ದಾರಂದ, ದಿಬ್ಬಣ, ಸಬೂಬು, ನೇಪಥ್ಯ

ಇ) ಐದು ಪದಗಳನ್ನು ಬಿಡಿಸಿ ಬರೆಯಿರಿ. **(5×1=5)**

ಪರೋಪಕಾರ, ಪ್ರತ್ಯುತ್ತರ, ಹೂಬುಟ್ಟಿ, ಸರ್ವಾಭರಣ, ಪೂರ್ವಾಗ್ರಹ, ಉರಿಬೇಸಗೆ, ನಡೆನುಡಿ

ಈ) ಪಂಚಾಂಗ, ಪಂಚಭೂತ– ಹೀಗೆ 'ಪಂಚ' ದಿಂದ ಪ್ರಾರಂಭವಾಗುವ ಐದು ಪದಗಳನ್ನು ಬರೆಯಿರಿ. **(5×1=5)**

P.T.O.

III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ. **(4×5=20)**

1) ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ಅನ್ಯಾಯ, ಅಕ್ರಮಗಳನ್ನು ಶರೀಫಾ ಹೇಗೆ ಪ್ರಶ್ನಿಸಿದ್ದಾರೆ ?
2) ರಂಗಪ್ಪನ ಜೋಪಡಿಯ ಅವಸ್ಥೆ ಹೇಗಿತ್ತು ?
3) ಸಿರಿಯತ್ತೆ ಮದುವೆಯಾಗಿ ಹೋದ ದಿನ ಅಕ್ಕು ಮಾಡಿದ ಗಲಾಟೆಯೇನು ?
4) ಮನುಷ್ಯನ ಲೌಕಿಕ ಅವಶ್ಯಕತೆ, ಆಡಂಬರಗಳನ್ನು ಪೂರೈಸಿಕೊಳ್ಳಲು ಬುಲ್ಡೋಜರ್ ಹೇಗೆ ನೆರವಿಗೆ ಬರುತ್ತದೆ ?
5) ನಾಯಿಯೂ ಮಗುವೂ ಒಂದೇನಾ ? ಈ ಬಗ್ಗೆ ಪ್ರಬಂಧಕಾರರ ಅಭಿಪ್ರಾಯವೇನು ?
6) ಸಮಾಜವಾದ ಕುರಿತು ಭಗವಾನನ ಭಾಷಣದಲ್ಲಿ ವ್ಯಕ್ತವಾಗುವ ವಿಚಾರಗಳೇನು ?

IV. ಈ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. **(4×12=48)**

1) ಶೀಲ ಪರಿಪಾಲನೆ ಮಾಡಿಕೋ ಎಂದು ರಾವಣ ಉಪರಂಭೆಗೆ ಹೇಳಬೇಕಾಗಿ ಬಂದ ಸಂದರ್ಭದ ಸೂಕ್ಷ್ಮತೆಗಳನ್ನು ಚರ್ಚಿಸಿ.

**ಅಥವಾ**

ರೂಪು, ಯೌವ್ವನ ಮತ್ತು ಕುಲದ ವಿಚಾರಗಳು ಹರಿಶ್ಚಂದ್ರ ಗಾನರಾಣಿಯರ ನಡುವೆ ವಾಗ್ವಾದಕ್ಕೆ ಕಾರಣವಾದದ್ದು ಹೇಗೆ ? ವಿಶದಪಡಿಸಿ.

2) 'ಅಕ್ಕುವಿನಂಥ ಪಾತ್ರಗಳು ರೋಗಗ್ರಸ್ತ ಮನಸ್ಸುಗಳ ಸೃಷ್ಟಿ'–ಈ ಹೇಳಿಕೆಯನ್ನು ವಿಶ್ಲೇಷಿಸಿ.

**ಅಥವಾ**

'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕಥೆಯಲ್ಲಿ ನಡೆಯುವ ಕೊಲೆಯನ್ನು ರಂಗಪ್ಪನ ದಾರುಣ ಬದುಕಿನ ಹಿನ್ನೆಲೆಯಲ್ಲಿ ಪರಿಶೀಲಿಸಿ.

3) ಬುಲ್ಡೋಜರ್ ಅಪರಾಧಿಯೇ ಅಥವಾ ಆಪದ್ಬಾಂಧವ ಯಂತ್ರವೋ ? ನಿದರ್ಶನಗಳೊಂದಿಗೆ ಚರ್ಚಿಸಿ

**ಅಥವಾ**

'ನಾಯಿ ಸಾಕುವುದರಿಂದ ಮನುಷ್ಯನಿಗೆ ಸಂತೋಷವೂ ಇದೆ, ಸಂಕಟವೂ ಇದೆ'– ಈ ಮಾತನ್ನು 'ನಾಯಿ ನೆರಳು' ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

4) ನಕ್ಸಲೈಟ್‌ರ ಹೋರಾಟದ ಹಿನ್ನೆಲೆಯೇನು ? ಅವರ ಹೋರಾಟ ಯಶಸ್ವಿಯಾಗಲು ಸಾಧ್ಯವೇ ? 'ಕ್ರಾಂತಿ ಬಂತು ಕ್ರಾಂತಿ' ನಾಟಕವನ್ನು ದೃಷ್ಟಿಯಲ್ಲಿರಿಸಿಕೊಂಡು ಚರ್ಚಿಸಿ.

**ಅಥವಾ**

ಭಗವಾನ್, ಸುಧಾ, ಇನ್‌ಸ್ಪೆಕ್ಟರ್–ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

---